**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಚನ್ನರಾಯಪಟ್ಟಣ**

**ಸಿ.ಸಿ.ನಂ.15/2021**

| ಪಿರ್ಯಾದುದಾರರು :- | -ವಿರುದ್ಧ - | ಆರೋಪಿತರು :- |
|---|---|---|
| ಎನ್. ಮಹೇಶ | | ಜಯಂತಿ |

ಹೆಸರು :

ತಂದೆಯ ಹೆಸರು :

ವಯಸ್ಸು :

ಉದ್ಯೋಗ :

ವಾಸ :

**ಭಾರತ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿ ಹೇಳಿಕೆ**

**ಪ್ರಶ್ನೆ 1** : ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿರುವಿರಾ ?

ಉತ್ತರ :

**ಪ್ರಶ್ನೆ 2** : ಫ್ರಾಸಾ-1- ಎನ್.ಮಹೇಶ ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ಹಾಗೂ ತಾನು ಪರಿಚಯಸ್ಥರಾಗಿದ್ದು, ಆರೋಪಿ ತನ್ನ ದರ್ದು ನಿಮಿತ್ತ ಅಂದರೆ ಆರೋಪಿಯು ತಾನು ಮಾಡಿದ ಸಾಲ ತೀರುವಳಿ ಮಾಡುವ ಸಲುವಾಗಿ ಮತ್ತು ಗೃಹಕೃತ್ಯದ ಸಲುವಾಗಿ ಹಾಗೂ ವ್ಯವಹಾರಕ್ಕಾಗಿ ತನ್ನನ್ನು 2020ನೇ ಜನವರಿ ಮಾಹೆ 1ನೇ ವಾರದಲ್ಲಿ ಭೇಟಿ ಮಾಡಿ ರೂ.2,00,000/- ಗಳನ್ನು ಸಾಲವಾಗಿ ಕೇಳಲಾಗಿ ತಾನು ಆರೋಪಿಗೆ ದಿನಾಂಕಃ 04.01.2020 ರಂದು ರೂ.2,00,000/- ಗಳನ್ನು ಸಾಲವಾಗಿ ನೀಡಿದ್ದು, ಸದರಿ ಹಣವನ್ನು ತೀರುವಳಿ ಮಾಡುವ ಖಾತ್ರಿಗಾಗಿ ಆರೋಪಿ ತಾನು ಖಾತೆ ಹೊಂದಿರುವ ಕಾರ್ಪೋರೇಷನ್ ಬ್ಯಾಂಕ್, ಶ್ರವಣಬೆಳಗೊಳ ಶಾಖೆಗೆ ಸೇರಿದ ಚೆಕ್ ನಂ.**436654**ನ್ನು ಮುಂಗಡ ದಿಃ 25.11.2020 ಎಂದು ನಮೂದಿಸಿ ತನಗೆ ನೀಡಿದ್ದು, ಸದರಿ ದಿನದಂದು ತಾನು ಹಣ ಪಡೆಯುವ ಸಲುವಾಗಿ ತಾನು ಖಾತೆ ಹೊಂದಿರುವ ಕಾರ್ಪೋರೇಷನ್ ಬ್ಯಾಂಕ್, ಶ್ರವಣಬೆಳಗೊಳ ಶಾಖೆಗೆ ಚೆಕ್ಕನ್ನು

ಹಾಜರುಪಡಿಸಲಾಗಿ ಸದರಿ ಬ್ಯಾಂಕಿನವರು 'ಸಾಕಷ್ಟು ಹಣವಿಲ್ಲ' ಎಂಬ ಹಿಂಬರಹದೊಂದಿಗೆ ದಿಃ 25.11.2020 ರಂದು ಚೆಕ್ಕನ್ನು ವಾಪಸ್ ನೀಡಿದ್ದು ನಂತರ ತಾನು ತಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆ ಮೂಲಕ ದಿಃ 27.11.2020 ರಂದು ನೋಟೀಸ್ ನೀಡಿದ್ದು, ಸದರಿ ನೋಟೀಸ್ ಆರೋಪಿಗೆ ದಿಃ 28.11.2020 ರಂದು ಜಾರಿಯಾಗಿದ್ದು, ಆರೋಪಿಗೆ ಈ ಎಲ್ಲಾ ಮಾಹಿತಿ ತಿಳಿದಿದ್ದರೂ ಯಾವುದೇ ಜವಾಬನ್ನು ನೀಡದೆ, ಸಾಲದ ಹಣವನ್ನು ವಾಪಸ್ಸು ಮಾಡಿರುವುದಿಲ್ಲವಾಗಿ ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೇನು ಹೇಳುವಿರಿ?

ಉತ್ತರ :

**ಪ್ರಶ್ನೆ 3** : ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ನೀಡಿರುವ ಚೆಕ್ಕನ್ನು ನಿಪಿ–1 ರಂತೆ, ಬ್ಯಾಂಕ್ ಹಿಂಬರಹವನ್ನು ನಿಪಿ–2 ರಂತೆ, ಅಂಚೆ ರಶೀದಿಗಳನ್ನು ನಿಪಿ–3 ಮತ್ತು 4 ರಂತೆ, ವಕೀಲರ ನೋಟೀಸಿನ ಕಛೇರಿ ಪ್ರತಿಯನ್ನು ನಿಪಿ–5 ರಂತೆ ಮತ್ತು ಅಂಚೆ ಸ್ವೀಕೃತಿಗಳನ್ನು ನಿಪಿ–6 ಮತ್ತು 7 ರಂತೆ ಗುರುತಿಸಿರುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೇನು ಹೇಳುವಿರಿ?

ಉತ್ತರ :

**ಪ್ರಶ್ನೆ 4** : ನಿಮಗೆ ಇನ್ನೇನಾದರೂ ಹೇಳುವುದು ಇದೆಯಾ?

ಉತ್ತರ :

**ಪ್ರಶ್ನೆ 5** : ನೀವು ನಿಮ್ಮ ಪರವಾಗಿ ಯಾವುದಾದರೂ ದಾಖಲೆಯನ್ನು ಹಾಜರು ಮಾಡುವಿರಾ?

ಉತ್ತರ :

**ಪ್ರಶ್ನೆ 6** : ನಿಮ್ಮ ಪರವಾಗಿ ಸಾಕ್ಷಿ ಮಾಡಿಸುವಿರಾ ?

ಉತ್ತರ :

**ದಿನಾಂಕ 22 ನೇ ಸೆಪ್ಟೆಂಬರ್ 2025**

ಆರೋಪಿ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ತಯಾರಿಸಿ ಆತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ನಂತರ ಆತನ ಸಹಿ ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಓ. ಹೇ. ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್ ಸಿ., ಚನ್ನರಾಯಪಟ್ಟಣ.